# : ಕೇಸ್ ಸ್ಟಡಿ :

**ಹೆಸರು: ಶ್ರೀಮತಿ ಯಲ್ಲಮ್ಮ ಬಿ** **ಉದ್ಯೋಗ: ಹೋಟೆಲ್ ವ್ಯಾಪಾರ**



ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕಿನ ಆನವಟ್ಟಿ ಗ್ರಾಮದ ಶ್ರೀಮತಿ ಯಲ್ಲಮ್ಮ ಗಂಡ ಬಸವರಾಜಪ್ಪ ಇಬ್ಬರು ಮಕ್ಕಳೊಂದಿಗೆ ಜೀವನ ಸಾಗಿಸುತ್ತಾ ಇದ್ದು, ಮಗಳನ್ನು ಮದುವೆ ಮಾಡಿಕೊಟ್ಟು ಸಾಲಗಾರಳಾಗಿ ಜೀವನ ಸಾಗಿಸೊದು ಬಹಳ ಕಷ್ಟದಾಯಕವಾಗಿತ್ತು. ಆರ್ಥಿಕವಾಗಿ ಹಿಂದುಳಿದು ಜೀವನ ನಿರ್ವಹಣೆ ಮಾಡುವುದು ಬಹಳ ತೊಂದರೆಯಾಗಿ, ದೃತಿಗೆಡದೆ ಜೀವನದಲ್ಲಿ ಮುಂದೆ ಬರಬೇಕೆಂದು ಹಂಬಲಿಸುತ್ತಿದ್ದಳು, ಆಗ ಅವಳ ಆಸರೆಗೆ ಬಂದದ್ದು, **"ನವಚೇತನ ಮೈಕ್ರೋಫೀನ್ ಸರ್ವಿಸಸ್ ಪ್ರೈವೆಟ್ ಲಿಮಿಟೆಡ್"** ಆನವಟ್ಟಿ ಶಾಖೆ.

"ನವಚೇತನ ಮೈಕ್ರೋಫೀನ್ ಸರ್ವಿಸಸ್ ಪ್ರೈವೆಟ್ ಲಿಮಿಟೆಡ್" ಆನವಟ್ಟಿ ಶಾಖೆಯಿಂದ ಅದೇ ಗ್ರಾಮದಲ್ಲಿ ಸಾಲ ಪಡೆದ ಮಹಿಳೆಯರನ್ನು ಭೇಡಿಮಾಡಿ ಸಾಲ ಪಡೆಯುವ ಬಗ್ಗೆ ಮಾಹಿತಿ ಪಡೆದು, ೨೦೧೧-೧೨ ರಲ್ಲಿ ಮಹೇಶ್ವರಿ ಜಂಟಿ ಹೊಣೆಗಾರಿಕೆ ಗುಂಪಿನಲ್ಲಿ ಸದಸ್ಯರಾಗಿ **ರೂ**. ೧೦೦೦೦/- ಗಳನ್ನು ಸಣ್ಣ ಅಂಗಡಿ ಆರಂಭಿಸುವ ಉದ್ದೇಶಕ್ಕೆ ಸಾಲ ಪಡೆದು ಸಾದಿಸಿ ತೊರಿಸಬೇಕೆಂದು ಸಣ್ಣ ವ್ಯಾಪಾರದಲ್ಲಿ ತೊಡಗಿ ಆರ್ಥಿಕವಾಗಿ ಸ್ವಲ್ಪ ಚೇತರಿಕೊಂಡು, ಮತ್ತೆ ೨೦೧೨-೧೩ ನೇ ಸಾಲಿನಲ್ಲಿ **ರೂ**. ೧೫೦೦೦/- ಸಾಲ ಪಡೆದು ಚಿಕ್ಕದಾದ ಅಂಗಡಿಯ ಜೊತೆಗೆ ಹೊಟೇಲ್‌ನ್ನು ಮಾಡಿ ವ್ಯಾಪಾರವನ್ನು ಹೆಚ್ಚಿಸಿ, ಆರ್ಥಿಕವಾಗಿ ಸುಧಾರಿಸಿಕೊಂಡಿದ್ದು, ಈಗ **ಎಲ್ಲಮ್ಮನ ಹೋಟೇಲ್** ಎಂಬ ಹೆಸರಿನಿಂದ ಹೆಸರುಗಳಿಸಿರುವಳು. ೨೦೧೩-೧೪ ರಲ್ಲಿ ಮತ್ತೆ ರೂ. **೩೦೦೦೦/- ಸಾಲ ಪಡೆದು** ಹೊಟೇಲ್‌ನ ಜೊತೆಗೆ ಖಾನಾವಳಿ ಪ್ರಾರಂಬಿಸಿ ಆರ್ಥಿಕವಾಗಿ ಸದೃಡವಾದಳು. ಗಂಡ ಹಾಗೂ ಮಗ ಜೊತೆಗೂಡಿ ಕೆಲಸಮಾಡುತ್ತಿದ್ದು ಹೆಚ್ಚಿನ ಆದಾಯದೊಂದಿಗೆ ಸ್ವಂತ ಮನೆ ಮತ್ತು ಅಂಗಡಿಯನ್ನು ಹೊಂದಿರುವಳು.

ತದನಂತರ ೨೦೧೪-೧೫ ರಲ್ಲಿ ರೂ. **೩೬೦೦೦/- ಸಾಲ** ಪಡೆದು ಹೆಚ್ಚಿನ ಬಂಡವಾಳ ಹಾಕಿ ಮಾದರಿ ಹೊಟೇಲ್ ಮಾಡಬೇಕೆಂದು ಬಹುದಾಶೆ ಹೊಂದಿದ್ದು ಆರ್ಥಿಕ ಬದಲಾವಣೆ ಕಂಡು ಕೊಂಡಿದ್ದಾಳೆ. **ಎಲ್ಲಮ್ಮನ ಹೋಟೇಲ್** ಎಂಬ ಹೆಸರಿನಿಂದ ಪ್ರಸಿದ್ಧಿ ಆಗಿರುವ ಈಕೆ ನನ್ನಂತೆಯೇ ಇತರರಿಗೆ **ನವಚೇತನ ಮೈಕ್ರೋಫೀನ್ ಸರ್ವಿಸಸ್ ಪ್ರೈವೆಟ್ ಲಿಮಿಟೆಡ್**. ಸ್ಫೂರ್ತಿಯಾಗಲೇಂದು ಹಾರೈಸುತ್ತಾಳೆ...

*****

ಜಯಪ್ಪ ಪೂಜಾರ

ಶಾಖಾ ವ್ಯವಸ್ಥಾಪಕರು, ಆನವಟ್ಟಿ

## : ಕೇಸ್ ಸ್ಟಡಿ :

**ಹೆಸರು: ಶ್ರೀಮತಿ ಮೆಹರುನಬಿ ಮೌಲಾಸಾಬ ಹುಣಸಿಮರದ** **ಉದ್ಯೋಗ: ಮಿಠಾಯಿ ವ್ಯಾಪಾರ**



ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಕೆರೂಡಿ ಗ್ರಾಮದ ಶ್ರೀ ಅಲ್ಲಾಭಕ್ಷ ಮತ್ತು ಶ್ರೀಮತಿ ಬುಡುನಬಿ ಎಂಬ ಬಡದಂಪತಿಗಳ ಮಗಳಾಗಿ ಜನಿಸಿದ ಶ್ರೀಮತಿ ಮೆಹರುನಬಿ, ಇವಳು ತನ್ನ ನಾಲ್ಕು ವರ್ಷದ ಬಾಲ್ಯದಲ್ಲಿಯೇ ತನ್ನ ತಂದೆ ತಾಯಿಯನ್ನು ಕಳೆದುಕೊಂಡು ಅವರ ಪ್ರೀತಿ ವಾತ್ಸಲ್ಯದಿಂದ ವಂಚಿತಳಾಗಿ ಅನಾಥಳಾದ ಇವಳು ತನ್ನ ಅಣ್ಣ ತಮ್ಮಂದಿರ ಜೊತೆಗೆ ಅದೇ ಊರಿನ ಅವರ ಚಿಕ್ಕಪ್ಪನ ಆಶ್ರಯದಲ್ಲೇ ಕೂಲಿ ಕೆಲಸ ಮಾಡುತ್ತಾ, ತನ್ನ ಬಾಲ್ಯಜೀವನವನ್ನು ಕಳೆದು ಅನಕ್ಷರಸ್ಥಳಾಗಿಯೇ ಉಳಿದಳು. ನಂತರ ಇವಳ ಚಿಕ್ಕಪ್ಪ ಬ್ಯಾಡಗಿ ಊರಿನ ಮೌಲಾಸಾಬ ಎಂಬುವರಿಗೆ ೧೯೮೩ ರಲ್ಲಿ ಮದುವೆ ಮಾಡಿಕೊಟ್ಟು, ಮುಂದೆ ಗಂಡ ಹೆಂಡತಿ ಕೂಲಿ ಮಾಡುತ್ತ ಜೀವನ ನಡೆಸಲಾರಂಭಿಸಿದರು. ಮೆಹರುನಬಿ ಮುಂದೆ ಬಡತನಕ್ಕೆ ಮಕ್ಕಳು ಹೆಚ್ಚು ಎನ್ನುವಂತೆ ೮ ಮಕ್ಕಳಿಗೆ ಜನ್ಮ ನೀಡುತ್ತಾಳೆ. ಅವಳ ಸಂಸಾರ ದೊಡ್ಡದಾದಂತೆ ಕುಟುಂಬದ ಖರ್ಚು ವೆಚ್ಚಗಳು ಮೆಹರುನಬಿಯನ್ನು ಕಿತ್ತು ತಿನ್ನುವ ಬಡತನಕ್ಕೆ ಗುರಿಮಾಡಿದವು. ಸಂಸಾರದ ಜವಾಬ್ದಾರಿ ಮಕ್ಕಳ ಲಾಲನೆ ಪಾಲನೆ ಎಲ್ಲವನ್ನು ನಿಭಾಯಿಸಲಾಗದೇ ಅಸಹಾಯಕಳಾದ ಸಂದರ್ಭದಲ್ಲಿ ನೆರೆಹೊರೆಯ ಸಮಾಜದಲ್ಲಿ ಸುಜೀವನ ನಡೆಸಲು ದಾರಿದೀಪವಾಗಿ ಅವಳ ಸಹಾಯಕ್ಕೆ ಬಂದದ್ದು ನವಚೇತನ ಮೈಕ್ರೋಫಿನ್ ಸರ್ವಿಸಸ್ ಪ್ರೈವೆಟ್ ಲಿಮಿಟೆಡೆ ಬ್ಯಾಡಗಿ ಶಾಖೆ.

**"ನವಚೇತನ ಮೈಕ್ರೋಫೀನ್ ಸರ್ವಿಸಸ್ ಪ್ರೈವೆಟ್ ಲಿಮಿಟೆಡ್"** ಬ್ಯಾಡಗಿ ಶಾಖೆಗೆ ಭೇಡಿಮಾಡಿ ಸಾಲ ಪಡೆಯುವ ಬಗ್ಗೆ ಮಾಹಿತಿ ಪಡೆದು, ದಾನಮ್ಮದೇವಿ ಜಂಟಿ ಹೊಣೆಗಾರಿಕೆ ಗುಂಪಿನಲ್ಲಿ ಸದಸ್ಯರಾಗಿ, ೨೦೦೮ ರಲ್ಲಿ ರೂ.೧೫೦೦೦/- ನ್ನು ಸಾಲವಾಗಿ ಪಡೆದು, ಸಣ್ಣದಾಗಿ ಮಿಠಾಯಿ ಮಾರಾಟ ಮಾಡತೊಡಗಿದಳು. ನಂತರ ೨೦೦೯ ರಲ್ಲಿ ಮತ್ತೆ ರೂ.೧೫೦೦೦/- ಹಾಗೂ ೨೦೧೦ ರಲ್ಲಿ ರೂ.೧೫೦೦೦/- ನ್ನು ಸಾಲ ತೆಗೆದುಕೊಂಡು ಮನೆಯ ಖರ್ಚುವೆಚ್ಚ ಪೊರೈಸಿ ಸ್ವಲ್ಪ ಉಳಿತಾಯ ಮಾಡಿದಳು. ೨೦೧೩ ರಲ್ಲಿ ರೂ.೩೦೦೦೦/- ಸಾಲ ಪಡೆದು ಲಾಬದಿಂದ ಬಂದ ಹಣ ರೂ. ೨೦೦೦೦/- ಸೇರಿಸಿಕೊಂಡು ಒಟ್ಟು ರೂ. ೫೦೦೦೦/- ಬಂಡವಾಳ ಹಾಕಿ ನಾಲ್ಕು ಜನರನ್ನು ಕೆಲಸಕ್ಕೆ ನೇಮಿಸಿಕೊಂಡು ಸುತ್ತುಮುತ್ತಲೂ ಹಳ್ಳಿಗಳಿಗೆ ಮಿಠಾಯಿ ಮಾರಾಟ ಮಾಡಿ ಪ್ರತಿ ದಿನಕ್ಕೆ ರೂ.೧೦೦೦/- ಲಾಭಗಳಿಸುತ್ತಿದ್ದಾಳೆ. ಜೊತೆಗೆ ತನ್ನ ಗಂಡನಿಗೆ ೪ ಹಸುಗಳನ್ನು ಕೊಡಿಸಿ ಹೈನುಗಾರಿಕೆಯಲ್ಲಿ ತೊಡಗಿಸಿದ್ದಾಳೆ, ತನ್ನ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಒಬ್ಬರಿಗೆ ಉದ್ಯೋಗದಲ್ಲಿ ತೊಡಗಿಸಿ ಇನ್ನೊಬ್ಬರಿಗೆ ಸ್ವಂತ ಚಹದ ಅಂಗಡಿಯನ್ನು ತೆರೆದು ಅವರ ಜೀವನಕ್ಕೆ ದಾರಿ ಮಾಡಿದ್ದಾಳೆ, ಉಳಿದವರಿಗೆ ಒಳ್ಳೆಯ ಉದ್ಯೋಗವನ್ನು ಕೊಡಿಸಿ ಅವರ ಜೀವನಕ್ಕೆ ದಾರಿದೀಪವಾಗಿ ಅವರ ಏಳಿಗೆಗೆ ಶ್ರಮಿಸುತ್ತಿದ್ದಾಳೆ. ಅಂದು ಅನಾಥಳಾಗಿ ನಿರ್ಭಾಗ್ಯಳಾಗಿ, ಜೀವನ ನಡೆಸಿದ ಮೆಹರುನಬಿ ಇಂದು ಇಡೀ ಕುಟುಂಬಕ್ಕೆ, ಸಮಾಜಕ್ಕೆ ಮಾದರಿ ಮಹಿಳೆಯಾಗಿ ಹೆಮ್ಮೆಯ ಗೃಹಿಣಿಯಾಗಿ ಜೀವನ ನಡೆಸುತ್ತಿರುವುದಕ್ಕೆ ಕಾರಣ ಈ ನವಚೇತನ ಮೈಕ್ರೋಫೈನಾನ್ಸ ನನಗೆ ಆಶ್ರಯದಾತನಾಗಿ ನನ್ನ ಬಾಳಿಗೆ ನವಚೈತನ್ಯ ತುಂಬಿ ಹೊಸ ಜೀವನವನ್ನು ವರವನ್ನಾಗಿ ಕೊಟ್ಟಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ.

*****

ಅಕ್ಕಮ್ಮ ಬಡಿಗೇರ

ಶಾಖಾ ವ್ಯವಸ್ಥಾಪಕರು, ಬ್ಯಾಡಗಿ